ಶ್ರೀ ಹೆಚ್. ಡಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಖಿಂಖಿ

ಆ) ಳಟಿಟ

ಇ) ಬಂದಿದೆ.

ಈ) ದಿನಾಂಕ ೬-೧೨-೧೯೮೫ರಲ್ಲಿ ೧೧೦ ಮಹಿಳಾ ವೈದ್ಯಾಧಿಕಾರಿಗಳನ್ನು ಮತ್ತು ೧೭-೭-೧೯೮೬ರಲ್ಲಿ ೪೦ ಮಹಿಳಾ ವೈದ್ಯಾಧಿಕಾರಿಗಳನ್ನು ನೇಮಿಸಲಾಗಿದೆ.

ಶಾಹಾಬಾದ್‌ನಲ್ಲಿ ಜೆ.ಎಂ.ಎಫ್.ಸಿ. ಕಟ್ಟಡದ ಬಗ್ಗೆ.

೨೦೬ ಶ್ರೀ ಕೆ. ಬಿ. ಶಾಣಪ್ಪ (ಶಾಹಾಬಾದ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಚಿತ್ತಾಪುರ ಜೆ. ಎಂ. ಎಫ್. ಸಿ.ಯು ನ್ಯಾಯಾಧೀಶರು ವಾರದ ಎರಡು ದಿನಗಳಲ್ಲಿ ಶಾಹಾಬಾದ್‌ನಲ್ಲಿ ವಿಚಾರಣೆಗಳನ್ನು ನಡೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ವಿಚಾರಣೆ ಸಭೆ ಕೆಲವು ತಿಂಗಳುಗಳಿಂದ ನಿಂತೋಗಿರುವುದಕ್ಕೆ ಕಾರಣವೇನು?

ಇ) ಶಾಹಾಬಾದ್‌ನಲ್ಲಿ ಒಂದು ಜೆ. ಎಂ. ಎಫ್. ಸಿ.ಯ ಹೊಸ ಕಟ್ಟಡ ಮತ್ತು ಸಿಬ್ಬಂದಿ ಕಟ್ಟಡಗಳನ್ನು ಕಟ್ಟುವ ವಿಚಾರ ಸರ್ಕಾರದವರ ಗಮನದಲ್ಲಿದೆಯೇ ? ಹಾಗಿದಲ್ಲಿ, ಅದನ್ನು ಯಾವ ವರ್ಷದಿಂದ ಕಾರ್ಯರೂಪದಲ್ಲಿ ತರಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಹೌದು.

ಆ) ಈಗಿರುವ ನ್ಯಾಯಾಲಯ ಕಟ್ಟಡವು ಸೋರುತ್ತದೆ ಮತ್ತು ಸರಿದಿ ಕಟ್ಟಡದಲ್ಲಿ ನ್ಯಾಯಾಲಯವನ್ನು ನಡೆಸುವುದು ಸುರಕ್ಷಿತವಲ್ಲ.

ಇ) ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಕಳ್ಳಬಟ್ಟಿ ಪ್ರಕರಣಗಳ ಪತ್ತೆ ಹಚ್ಚುವಿಕೆ

೧೯೬. ಶ್ರೀ ಬಿ. ಎಂ. ಇದಿನಬ್ಬ (ಉಲ್ಲಾಳ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮತ್ತು ಅಬಕಾರಿ ಸಚಿವರು ದಯೆಯಿಟ್ಟು ಉತ್ತರಿಸಂವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೮೪-೮೫, ೧೯೮೫-೮೬, ರಲ್ಲಿ ಪತ್ತೆ ಹಚ್ಚಿದ ಕಳ್ಳಬಟ್ಟಿ ಪ್ರಕರಣಗಳೆಷ್ಟು ?

ಆ) ಎಷ್ಟು ಕಳ್ಳಬಟ್ಟಿ ನಾಶಮಾಡಲಾಗಿದೆ, ಎಷ್ಟು ಸೊತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ?

ಇ) ಎಷ್ಟು ಪ್ರಕರಣಗಳ ಬಗ್ಗೆ ದಾವೆ ಹೂಡಲಾಗಿದೆ ? ಎಷ್ಟು ಜನರಿಗೆ ಶಿಕ್ಷೆ ಆಗಿದೆ ?

ಈ) ಈ ಕಳ್ಳಬಟ್ಟಿ ನಿರ್ಮೂಲನಕ್ಕೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಸಚಿವರು).—

	೧೯೮೪-೮೫	೧೯೮೫-೮೬
ಅ)	೩೧	೧೬
ಆ)	೮೩೮೭ ಲೀಟರ್ ೩೦೭	೫೮೮೫ ಲೀಟರ್ ೧೯೮
ಇ)	೫೩೬ ೫೨೪	೫೫೩ ೩೫೮

ಈ) ಭಟ್ಟಿ ಕೇಂದ್ರಗಳ ಮೇಲೆ ಸತತ ದಾಳಿ ನಡೆಸುವುದು. ಭಟ್ಟಿ ಕೇಂದ್ರಗಳು ಉದ್ಭವಿಸದಂತೆ ತಡೆಗಟ್ಟುವುದು.

ರಾಜ್ಯದಲ್ಲಿ ಪೆಟ್ರೋಲ್ ಹಾಗೂ ಡೀಸಲ್ ಮಾರಾಟ ಮಾಡುವ ವ್ಯವಸ್ಥೆ

೨೩೨. ಶ್ರೀ ಎಂ. ಎಸ್. ಪಾಟೀಲ್ (ಸಂಕೇಶ್ವರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ವಂಯಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಪೆಟ್ರೋಲ್ ಪಂಪುಗಳ ಹಾಗೂ ಡೀಸಲ್ ಪಂಪುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಪೆಟ್ರೋಲ್ ಹಾಗೂ ಡೀಸಲ್ ಮಾರಾಟದ ಮೇಲೆ ಇರುವ ತೆರಿಗೆಯನ್ನು ರಾಜ್ಯದಲ್ಲಿ ಇನ್ನಷ್ಟು ಕಡಿಮೆ ಮಾಡಿ ಜನರಿಗೆ ಅನುಕೂಲ ಮಾಡಿಕೊಡುವುದರಲ್ಲಿ ಸರ್ಕಾರದವರ ಕ್ರಮವೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೮೨೫ (ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ)